# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 741

2 ಸದಸ್ಯರ ಹೆಸರು : ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮ ನಿರ್ದೇಶನ ಹೊಂದಿದವರು)

3 ಉತ್ತರಿಸಬೇಕಾದ ದಿನಾಂಕ : 13.03.2025

4 ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಇಲಾಖೆಯಲ್ಲಿರುವ ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳ ಅತಿಥಿ ಗೃಹಗಳ ಮತ್ತು ಸಂಶೋಧನಾ ಸಂಸ್ಥೆಗಳ ಸಂಖ್ಯೆ ಎಷ್ಟು; ಇವುಗಳನ್ನು ಯಾವ ಯಾವ ವರ್ಷಗಳಂದು ನಿರ್ಮಾಣ ಮಾಡಲಾಗಿದೆ; ನಿರ್ಮಾಣ ಮಾಡಲು ಸರ್ಕಾರದ ಪೂರ್ವಾನುಮತಿ ಪಡೆಯಲಾಗಿದೆಯೇ; ಅನುಮತಿ ಪಡೆಯದಿದ್ದಲ್ಲಿ ಪಡೆಯದಿರಲು ಕಾರಣವೇನು; ಸದರಿ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದಿಂದ ಮಂಜೂರಾದ ಹಣವೆಷ್ಟು; ಮತ್ತು ಇದುವರೆವಿಗೂ ಹಿಂದಿರುಗಿಸಲಾದ ಹಣವೆಷ್ಟು; (ದಾಖಲೆ ನೀಡುವುದು) | ಪೊಲೀಸ್ ಇಲಾಖೆಯಲ್ಲಿರುವ ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳ ಅತಿಥಿ ಗೃಹಗಳ ಮತ್ತು ಸಂಶೋಧನಾ ಸಂಸ್ಥೆಗಳ ಸಂಖ್ಯೆ–35.<br>ಇವುಗಳನ್ನು ನಿರ್ಮಾಣ ಮಾಡಲಾದ ವರ್ಷ, ನಿರ್ಮಾಣ ಮಾಡಲು ಸರ್ಕಾರದ ಪೂರ್ವಾನುಮತಿ ಪಡೆದಿರುವ ಬಗ್ಗೆ, ಅನುಮತಿ ಪಡೆಯದಿರಲು ಕಾರಣ, ಸದರಿ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದಿಂದ ಮಂಜೂರಾದ ಹಣ ಮತ್ತು ಇದುವರೆಗೂ ಹಿಂದಿರುಗಿಸಲಾದ ಹಣದ ಬಗ್ಗೆ ಮಾಹಿತಿಯನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ. |
| ಆ) | ಕಮಾಂಡೆಂಟ್ ಒಂದನೇ ಪಡೆ ಕೆಎಸ್‌ಆರ್‌ಪಿ ರವರ ಅಧೀನದಲ್ಲಿರುವ ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳ ಅತಿಥಿ ಗೃಹಗಳಲ್ಲಿ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಲಕ್ಷಾಂತರ ರೂ.ಗಳನ್ನು ಅಂದಿನ ಉಸ್ತುವಾರಿ ಅಧಿಕಾರಿ ಮತ್ತು ಅವರ ಅಧೀನ ಪೊಲೀಸ್ ಸಿಬ್ಬಂದಿಗಳು ದುರುಪಯೋಗ ಪಡಿಸಿಕೊಂಡ ಬಗ್ಗೆ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಅಪರಾಧ ಮೊಕ್ಕದ್ದಮೆ ಹೂಡದಿರಲು ಕಾರಣವೇನು; | ಕಮಾಂಡೆಂಟ್, 9ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ಪ್ರಾಥಮಿಕ ವಿಚಾರಣಾ ವರದಿ ಮೇರೆಗೆ ಕಿರಿಯ ಪೊಲೀಸ್ ಅಧಿಕಾರಿಗಳ ಮೆಸ್‌ನ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡು ದುರ್ನಡತೆ ಪ್ರದರ್ಶಿಸಿ ಕರ್ತವ್ಯ ಲೋಪವೆಸಗಿರುವ ಶ್ರೀ ಎನ್.ಎಸ್. ಪ್ರಕಾಶ್, ಸಹಾಯಕ ಕಮಾಂಡೆಂಟ್, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ವಿರುದ್ಧ ಕೆ.ಎಸ್.ಪಿ. (ಡಿಪಿ) ನಿಯಮಗಳು 1965/89 ರ ನಿಯಮ–6 ರಡಿ ಇಲಾಖಾ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 101 ಪೊಸಿಪ 2021, ದಿನಾಂಕ: 20.01.2022 ರಲ್ಲಿ ಡಿಸಿಪಿ, ಸಿಎಆರ್ (ಕೇಂದ್ರ), ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.<br>ವಿಚಾರಣಾ ವರದಿ ಮತ್ತು 2ನೇ ಕಾರಣ ಕೇಳುವ ನೋಟೀಸ್‌ಗೆ ಅಧಿಕಾರಿ ಸಲ್ಲಿಸಿದ್ದ ಸಮಜಾಯಿಷಿಯನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 101 ಪೊಸಿಪ 2021, ದಿನಾಂಕ: 11.07.2023 ರಲ್ಲಿ ಶ್ರೀ ಎನ್.ಎಸ್. ಪ್ರಕಾಶ್, ಸಹಾಯಕ ಕಮಾಂಡೆಂಟ್ ರವರ ವಿರುದ್ಧ ಹೊರಿಸಲಾದ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಲಾಗಿದೆ. |
| ಇ) | ಸಹಾಯಕ ಕಮಾಂಡೆಂಟ್ ಹಾಗೂ ಇತರ ಸಂಬಂಧಪಟ್ಟ ಪೊಲೀಸ್ ಸಿಬ್ಬಂದಿಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸದಿರಲು ಕಾರಣವೇನು; | ಪ್ರಾಥಮಿಕ ವಿಚಾರಣೆಯಲ್ಲಿ ಶ್ರೀ ಎನ್.ಎಸ್. ಪ್ರಕಾಶ್, ಸಹಾಯಕ ಕಮಾಂಡೆಂಟ್ ರವರ ವಿರುದ್ಧ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದಾಗಿ ತಿಳಿಸಿದ್ದು, ಸದರಿ ಅಧಿಕಾರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗಿರುತ್ತದೆ. |

| | | |
|---|---|---|
| ಈ) | ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆ ನಡೆಸಿದ ಅಧಿಕಾರಿಯು ಆಪಾದಿತ ಅಧಿಕಾರಿಯಾಗಿ ಹಣ ದುರುಪಯೋಗ ಮಾಡಿಕೊಂಡಿರುವುದಾಗಿ ಸಾಬೀತಾಗಿದೆ ಎಂದು ವರದಿ ನೀಡಿದರೂ ಈ ಅಧಿಕಾರಿಯನ್ನು ನಿರಪರಾಧಿಯೆಂದು ಪರಿಗಣಿಸಲು ಕಾರಣವೇನು? (ಸಂಪೂರ್ಣ ದಾಖಲೆಗಳನ್ನು ನೀಡುವುದು) | ಸರ್ಕಾರವು ಶ್ರೀ ಎನ್.ಎಸ್. ಪ್ರಕಾಶ್, ಸಹಾಯಕ ಕಮಾಂಡೆಂಟ್ ರವರ ವಿರುದ್ಧ ಕ್ರಮ ಬದ್ಧ ಇಲಾಖಾ ವಿಚಾರಣೆ ನಡೆಸಲು ಡಿಸಿಪಿ, ಸಿಎಆರ್ (ಕೇಂದ್ರ) ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.<br>ವಿಚಾರಣಾಧಿಕಾರಿಯವರು ವಿಚಾರಣೆಯಲ್ಲಿ 14 ಸಾಕ್ಷಿಗಳು 6 ವಿವಿಧ ದಾಖಲೆಗಳಲ್ಲಿ ಒಟ್ಟು 44 ನಿಶಾನೆಯನ್ನು ಗುರುತಿಸಿ ಅಂತಿಮ ವಿಚಾರಣಾ ವರದಿ ಸಲ್ಲಿಸಿದ್ದು, 03 ಆರೋಪಗಳ ಪೈಕಿ 2 ಆರೋಪಗಳು ಸಾಬೀತಾಗಿರುವ ಬಗ್ಗೆ ವರದಿ ನೀಡಿದ್ದು, ಸಾಬೀತಾಗಿರುವ 2 ಆರೋಪಗಳು ರಿಜಿಸ್ಟರ್ ನಿರ್ವಹಣೆ ಮಾಡದೆ ಇರುವುದು, ದಾಖಲೆಗಳನ್ನು ನಿರ್ವಹಿಸದಿರುವ ಆರೋಪವಾಗಿದೆ. 3ನೇ ಆರೋಪವು ಹಣ ದುರುಪಯೋಗದ ಬಗ್ಗೆ ಇದ್ದು ಈ ಆರೋಪವು ಸಾಬೀತಾಗಿರುವುದಿಲ್ಲ. ಈ ಬಗ್ಗೆ ನಿಯಮಾನುಸಾರ 2ನೇ ಕಾರಣ ಕೇಳುವ ಸೂಚನೆ ಪತ್ರ ಜಾರಿಗೊಳಿಸಿದ್ದು, ಅವರ ಸಮಜಾಯಿಷಿಯನ್ನು ಪರಿಗಣಿಸಿ ಸರ್ಕಾರದ ಆದೇಶ ಸಂಖ್ಯೆ: ಒಇ 101 ಪೊಸಿಪ 2021, ದಿನಾಂಕ: 20-01-2022ರಲ್ಲಿ ಹೊರಿಸಲಾದ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ. ದೋಷಾರೋಪಣಾ ಪಟ್ಟಿ, ವಿಚಾರಣಾಧಿಕಾರಿಯವರ ವರದಿ, 2ನೇ ಕಾರಣ ಕೇಳುವ ನೋಟೀಸ್, ಆರೋಪಿತರ ಸಮಜಾಯಿಷಿ ಹಾಗೂ ಸರ್ಕಾರದ ಅಂತಿಮ ಆದೇಶದ ಪ್ರತಿಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ. |

ಸಂಖ್ಯೆ: ಒಇ 94 ಪಿಇಜಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

# ಅನುಬಂಧ-1

| ಕ್ರ.ಸಂ | ಘಟಕ | ಪೊಲೀಸ್ ಇಲಾಖೆಯಲ್ಲಿರುವ ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳ ಅತಿಥಿ ಗೃಹಗಳ ಮತ್ತು ಸಂಶೋಧನಾ ಸಂಸ್ಥೆಗಳ ಸಂಖ್ಯೆ ಎಷ್ಟು; ಮತ್ತು ಹೆಸರುಗಳ ಪಟ್ಟಿ; | ನಿರ್ಮಾಣವಾದ ವರ್ಷ | ನಿರ್ಮಾಣ ಮಾಡಲು ಸರ್ಕಾರದ ಪೂರ್ವಾನುಮತಿ ಪಡೆಯಲಾಗಿದೆಯೇ; ಅನುಮತಿ ಪಡೆಯದಿದ್ದಲ್ಲಿ ಪಡೆಯದಿರಲು ಕಾರಣವೇನು; ಸದರಿ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದಿಂದ ಮಂಜೂರಾದ ಹಣವೆಷ್ಟು; ಮತ್ತು ಇದುವರೆವರೆಗೂ ಹಿಂದುರಿಗಿಸಲಾದ ಹಣವೆಷ್ಟು; |
|---|---|---|---|---|
| 1 | 2 | 3 | 4 | 5 |
| 1 | ಸಿಪಿಪಿ, ಬೆಂಗಳೂರು ನಗರ | ಹಿರಿಯ ಪೋಲೀಸ್ ಅಧಿಕಾರಿಗಳ ಸಂಶೋಧನಾ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು | 06.08.2020 | ಸೀನಿಯರ್ ಪೋಲೀಸ್ ಮೆಸ್ ಕಟ್ಟಡವು 1973ರಲ್ಲಿ ನಿರ್ಮಾಣವಾಗಿದ್ದು, ಸದರಿ ಕಟ್ಟಡವನ್ನು ಸರ್ಕಾರಿ ಆದೇಶ ಸಂಖ್ಯೆ:ಹೆಚ್-07/ಪಿಒಪಿ/2019, ದಿನಾಂಕ:06.08.2020 ರಲ್ಲಿ ಸೀನಿಯರ್ ಪೋಲೀಸ್ ಆಫೀಸರ್ಸ್ ರೀಸರ್ಚ್ & ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಎಂದು ಮರು ನಾಮಕರಣ ಮಾಡಲಾಗಿರುತ್ತದೆ. (ಆದೇಶದ ಪ್ರತಿ ಲಗತ್ತಿಸಿದೆ)<br>ಸೀನಿಯರ್ ಪೋಲೀಸ್ ಆಫೀಸರ್ಸ್ ರೀಸರ್ಚ್ & ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಕಟ್ಟಡಗಳ ನವೀಕರಣಕ್ಕೆ ರೂ.230.00 ಲಕ್ಷ ಮಂಜೂರಾಗಿರುತ್ತದೆ. |
| 2 | 1ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು | ಕೆಎಸ್‌ಆರ್‌ಪಿ, ಅಧಿಕಾರಿಗಳ ತರಬೇತಿ ಮತ್ತು ಸಂಶೋಧನ ಕೇಂದ್ರ, ಬೆಂಗಳೂರು | 10/2011 | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 07 ಪಿಎಫ್‌ಎಸ್ 2009 (ಭಾಗ) ಬೆಂಗಳೂರು, ದಿನಾಂಕ: 27.05.2009 (ಆದೇಶದ ಪ್ರತಿ ಲಗತ್ತಿಸಿದೆ)<br>12ನೇ ಹಣಕಾಸು ಯೋಜನೆ ಅಡಿಯಲ್ಲಿ ಒಟ್ಟು ರೂ.1,30,00,000 ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br>12ನೇ ಹಣಕಾಸು ಯೋಜನೆ ಅಡಿಯಲ್ಲಿ ಬಿಡುಗಡೆಗೊಳಿಸಲಾದ ಅನುದಾನವನ್ನು ಹಿಂದಿರುಗಿಸುವ ಕ್ರಮ ಉದ್ಭವಿಸುವುದಿಲ್ಲ. |
| 3 | 1ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು | ಕಿರಿಯ ಪೋಲೀಸ್ ಅಧಿಕಾರಿಗಳ ಅತಿಥಿ ಗೃಹ | 23/08/1986 | ಕಿರಿಯ ಪೋಲೀಸ್ ಅಧಿಕಾರಿಗಳ ಅತಿಥಿ ಗೃಹವು 1983ರಲ್ಲಿ ಕಾಮಗಾರಿ ಪ್ರಾರಂಭಿಸಿ 1986ರಲ್ಲಿ ಮುಕ್ತಾಯಗೊಂಡಿರುತ್ತದೆ.ಮಾನ್ಯ ಗೃಹ ಮಂತ್ರಿಗಳಾದ ಶ್ರೀ ಬಿ.ರಾಚಯ್ಯ ರವರಿಂದ ದಿ:23.08.1986 ರಂದು ಉದ್ಘಾಟನೆ ಮಾಡಲಾಗಿರುತ್ತದೆ. ಸದರಿ ಕಟ್ಟಡಕ್ಕೆ ಅನುದಾನ ಬಿಡುಗಡೆಯಾಗಿರುವ ಬಗ್ಗೆ ಮತ್ತು ನಿರ್ಮಾಣದ ಬಗ್ಗೆ ಯಾವುದೇ ಮಾಹಿತಿಗಳು ಲಭ್ಯವಿರುವುದಿಲ್ಲ. |
| 4 | ಸಿಪಿಪಿ, ಮೈಸೂರು ನಗರ | ಅತಿಥಿ ಗೃಹ | 2016 | ಆದೇಶದ ಪ್ರತಿ ಲಗತ್ತಿಸಿದೆ<br>100 ಲಕ್ಷ |
| 5 | ಸಿಪಿಪಿ, ಹುಬ್ಬಳ್ಳಿ-ಧಾರವಾಡ ನಗರ | ಪೃಥ್ವಿ ಅತಿಥಿ ಗೃಹ (ಹಿರಿಯ ಅಧಿಕಾರಿಗಳ ಅತಿಥಿ ಗೃಹ) | 25.05.2004 | ದಾಖಲೆಗಳು ಲಭ್ಯವಿರುವುದಿಲ್ಲ |
| 6 | ಸಿಪಿಪಿ, ಹುಬ್ಬಳ್ಳಿ-ಧಾರವಾಡ ನಗರ | ಆಕಾಶ ಅತಿಥಿ ಗೃಹ (ಅಧಿಕಾರಿ/ಸಿಬ್ಬಂದಿಗಳ ಅತಿಥಿ ಗೃಹ) | 20.04.2007 | ದಾಖಲೆಗಳು ಲಭ್ಯವಿರುವುದಿಲ್ಲ |

| | | | | |
|---|---|---|---|---|
| 7 | ಎಸ್‌ಪಿ, ದಕ್ಷಿಣ ಕನ್ನಡ ಜಿಲ್ಲೆ | ಪೊಲೀಸ್ ಅತಿಥಿ ಗೃಹ | 1996 | ಈ ಕಟ್ಟಡವನ್ನು ಪೊಲೀಸ್ ಕಲ್ಯಾಣ ಯೋಜನೆ ಅಡಿಯಲ್ಲಿ ನಿರ್ಮಿಸಲಾಗಿದೆ. |
| 8 | ಎಸ್‌ಪಿ, ಮೈಸೂರು ಜಿಲ್ಲೆ | ಪೊಲೀಸ್ ಅಧಿಕಾರಿಗಳ ವಿಶ್ರಾಂತಿ ಕೇಂದ್ರ, (ಜ್ಯೂನಿಯರ್ ಮೆಸ್ ಮೈಸೂರು) | 04.09.1980 | ದಾಖಲೆಗಳು ಲಭ್ಯವಿರುವುದಿಲ್ಲ |
| 9 | ಎಸ್‌ಪಿ, ಮೈಸೂರು ಜಿಲ್ಲೆ | ಪೊಲೀಸ್ ವಿಶ್ರಾಂತಿ ಗೃಹ, ದಕ್ಷಿಣ ವಲಯ, ಮೈಸೂರು | 30.07.2006 | ದಾಖಲೆಗಳು ಲಭ್ಯವಿರುವುದಿಲ್ಲ |
| 10 | ಎಸ್‌ಪಿ, ಚಿಕ್ಕಮಗಳೂರು ಜಿಲ್ಲೆ | ಪೊಲೀಸ್ ಕ್ಲಬ್ ಹೌಸ್, ಚಿಕ್ಕಮಗಳೂರು | 20.11.1968 | ದಾಖಲೆಗಳು ಲಭ್ಯವಿರುವುದಿಲ್ಲ |
| 11 | ಎಸ್‌ಪಿ, ಬಳ್ಳಾರಿ ಜಿಲ್ಲೆ | ಅತಿಥಿ ಗೃಹ | 1971 | ಸದರಿ ಕಟ್ಟಡವು 50 ವರ್ಷಗಳ ಹಿಂದೆ ನಿರ್ಮಾಣವಾಗಿದ್ದು, ಸದರಿ ಕಟ್ಟಡದ ಪೂರಕ ದಾಖಲೆಗಳು ಲಭ್ಯವಿರುವುದಿಲ್ಲ |
| 12 | ಎಸ್‌ಪಿ, ಚಾಮರಾಜನಗರ ಜಿಲ್ಲೆ | ಅತಿಥಿ ಗೃಹ | 2005 | ಚಾಮರಾಜನಗರ ಜಿಲ್ಲಾ ಪೊಲೀಸ್ ಕಛೇರಿಯ ನೂತನ ಕಟ್ಟಡ ಕಾಮಗಾರಿಯ ಸಂದರ್ಭದಲ್ಲಿ ಪೊಲೀಸ್ ಹೌಸಿಂಗ್ ಕಾರ್ಪೋರೇಷನ್, ಮೈಸೂರು ವಿಭಾಗದ ಅಧಿಕಾರಿಗಳು ಹಾಗೂ ಕಟ್ಟಡ ಕಾಮಗಾರಿ ಮುಕ್ತಾಯವಾದ ನಂತರ ಇದನ್ನು ನೆಲಸಮಗೊಳಸದೇ ಅಧಿಕಾರಿಗಳ ವಿಶ್ರಾಂತಿಗಾಗಿ ಹಾಗೆಯೇ ಉಳಿಸಿಕೊಳ್ಳಲಾಗಿದೆ. |
| 13 | ಎಸ್‌ಪಿ, ಬಾಗಲಕೋಟೆ ಜಿಲ್ಲೆ | ಕಿರಿಯ ಅಧಿಕಾರಿಗಳ ಅತಿಥಿ ಗೃಹ | 2001-02 | ಸದರಿ ಅತಿಥಿ ಗೃಹಗಳನ್ನು ಕೆಆರ್‌ಐಡಿಎಲ್ ವತಿಯಿಂದ ಹಾಗೂ ಸ್ಥಳೀಯ ಸಂಸದರ ನಿಧಿಯಿಂದ ನಿರ್ಮಾಣ ಮಾಡಲಾಗಿದೆ. |
| 14 | ಎಸ್‌ಪಿ, ಬಾಗಲಕೋಟೆ ಜಿಲ್ಲೆ | ಹಿರಿಯ ಅಧಿಕಾರಿಗಳ ಅತಿಥಿ ಗೃಹ | 2009-10 | ಸದರಿ ಅತಿಥಿ ಗೃಹಗಳನ್ನು ಕೆಆರ್‌ಐಡಿಎಲ್ ವತಿಯಿಂದ ಹಾಗೂ ಸ್ಥಳೀಯ ಸಂಸದರ ನಿಧಿಯಿಂದ ನಿರ್ಮಾಣ ಮಾಡಲಾಗಿದೆ. |
| 15 | ಎಸ್‌ಪಿ, ಚಿಕ್ಕಬಳ್ಳಾಪುರ ಜಿಲ್ಲೆ | ಪೊಲೀಸ್ ಅತಿಥಿ ಗೃಹಗಳು 02 | 20.02.2019 | ಪೊಲೀಸ್ ಅತಿಥಿ ಗೃಹಗಳನ್ನು ದಾನಿಗಳಿಂದ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ. ಸರ್ಕಾರದಿಂದ ಯಾವುದೇ ಅನುದಾನವನ್ನು ನೀಡಿರುವುದಿಲ್ಲ. |
| 16 | ಎಸ್‌ಪಿ, ಉತ್ತರ ಕನ್ನಡ ಜಿಲ್ಲೆ | ಅತಿಥಿ ಗೃಹ | 1938 | ಪೊಲೀಸ್ ಅತಿಥಿ ಗೃಹ ಕಟ್ಟಡವನ್ನು ಸ್ವಾತಂತ್ರ್ಯಪೂರ್ವದಲ್ಲಿ ನಿರ್ಮಾಣ ಮಾಡಿರುವುದಾಗಿ ತಿಳಿದು ಬಂದಿರುತ್ತದೆ. |

| | | | | |
|---|---|---|---|---|
| | | | | ಕಟ್ಟಡವನ್ನು ನಿರ್ಮಾಣ ಮಾಡಲು ಸರ್ಕಾರದಿಂದ ಅನುಮತಿ ಪಡೆದ ಬಗ್ಗೆ ಹಾಗೂ ಸರ್ಕಾರದಿಂದ ಮತ್ತು ಇತರೆ ಮೂಲಗಳಿಂದ ಹಣವನ್ನು ಪಡೆದ ಬಗ್ಗೆ ಕಡತದಲ್ಲಿ ಯಾವುದೇ ಮಾಹಿತಿ/ದಾಖಲೆಗಳು ದೊರಕಿರುವುದಿಲ್ಲ. |
| 17 | ಎಸ್‌ಪಿ, ಉಡುಪಿ ಜಿಲ್ಲೆ | ಪೊಲೀಸ್ ಅತಿಥಿ ಗೃಹ | – | ಪೊಲೀಸ್ ಹಿರಿಯ & ಕಿರಿಯ ಅಧಿಕಾರಿಗಳ ತುರ್ತು ವಾಸ್ತವ್ಯಕ್ಕಾಗಿ ಸಣ್ಣ ಪ್ರಮಾಣದಲ್ಲಿ ಪೊಲೀಸ್ ಅಧಿಕಾರಿಗಳ ಸಹಾಯದಿಂದ ಅತಿಥಿಗೃಹದ ನಿರ್ಮಾಣ ಮಾಡಲಾಗಿರುತ್ತದೆ, ಸರ್ಕಾರದಿಂದ ಯಾವುದೇ ಅನುಮತಿ/ ಅನುದಾನವನ್ನು ಪಡೆದು ಅತಿಥಿಗೃಹವನ್ನು ನಿರ್ಮಾಣ ಮಾಡಿರುವುದಿಲ್ಲ. |
| 18 | ಪಿಟಿಸಿ, ಕಲಬುರಗಿ ಜಿಲ್ಲೆ | ಪೊಲೀಸ್ ಅತಿಥಿ ಗೃಹ | 2005 | ಪಿಟಿಸಿ ನಿರ್ಮಾಣದ ಸಂದರ್ಭದಲ್ಲಿ ಲ್ಯಾಂಡ್ ಆರ್ಮಿ ವತಿಯಿಂದ ಉಡುಗರೆಯಾಗಿ ನಿರ್ಮಾಣಗೊಂಡಿದೆ |
| 19 | ಎಸ್‌ಪಿ, ಹಾವೇರಿ ಜಿಲ್ಲೆ | ಪೊಲೀಸ್ ಅತಿಥಿ ಗೃಹ | 30.04.1999 | ಸ್ಥಳಿಯ ಲೋಕಸಭಾ ಸದಸ್ಯರವರ ಅನುದಾನದಲ್ಲಿ ಕಟ್ಟಡಗಳ ನಿರ್ಮಾಣ ಮಾಡಲಾಗಿರುತ್ತದೆ. |
| 20 | ಎಸ್‌ಪಿ, ಹಾವೇರಿ ಜಿಲ್ಲೆ | ಪೊಲೀಸ್ ಅತಿಥಿ ಗೃಹ | 28.08.2011 | ರಾಣೇಬೆನ್ನೂರು ಶಹರದ ಅತಿಥಿ ಗೃಹವನ್ನು ಲೋಕೊಪಯೋಗಿ ಇಲಾಖೆಯ ವತಿಯಿಂದ ನಿರ್ಮಾಣವಾಗಿರುತ್ತದೆ. |
| 21 | ಎಸ್‌ಪಿ, ಧಾರವಾಡ ಜಿಲ್ಲೆ | ಪೊಲೀಸ್ ಅತಿಥಿ ಗೃಹ | 1997 | ಸದರಿ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ. |
| 22 | ಎಸ್‌ಪಿ, ರಾಯಚೂರು ಜಿಲ್ಲೆ | ಪೊಲೀಸ್ ಅತಿಥಿ ಗೃಹ | 1960 | ಸನ್ 1960ನೇ ಸಾಲಿನಲ್ಲಿ ರಾಯಚೂರು ಸಂಚಾರ ಪೊಲೀಸ್ ಠಾಣೆಯ ಖಾಲಿ ಜಾಗದಲ್ಲಿ 6 ಕೊಣೆಗಳಿರುವ ಪೊಲೀಸ್ ಅತಿಥಿ ಗೃಹವನ್ನು ದಾನಿಗಳಿಂದ ನಿರ್ಮಿಸಲಾಗಿರುತ್ತದೆ. |
| 23 | ಎಸ್‌ಪಿ, ಕಲಬುರಗಿ ಜಿಲ್ಲೆ | ಸನ್ಮತಿ ಪೊಲೀಸ್ ಅತಿಥಿ ಗೃಹ | 14.04.1997 | ದಾಖಲೆಗಳು ಲಭ್ಯವಿರುವುದಿಲ್ಲ |
| 24 | ಎಸ್‌ಪಿ, ಕಲಬುರಗಿ ಜಿಲ್ಲೆ | ನೆಮ್ಮದಿ ಪೊಲೀಸ್ ಅತಿಥಿ ಗೃಹ | 19.06.1978 | ದಾಖಲೆಗಳು ಲಭ್ಯವಿರುವುದಿಲ್ಲ |
| 25 | ಎಸ್‌ಪಿ, ಗದಗ ಜಿಲ್ಲೆ | ಪೊಲೀಸ್ ಅತಿಥಿ ಗೃಹ | ನೆಲಮಹಡಿ 2003 ಮೊದಲನೇ ಮಹಡಿ 2019 | ಪೊಲೀಸ್ ಅಧಿಕಾರಿಗಳ ಅನುಕೂಲಕ್ಕಾಗಿ ಸ್ಥಳೀಯ ಗಣ್ಯ ವ್ಯಕ್ತಿಗಳ ಸಹಾಯ/ಸಹಕಾರದಿಂದ ನಿರ್ಮಾಣಗೊಂಡಿರುತ್ತದೆ. |
| 26 | 5ನೇ ಪಡೆ, ಕೆಎಸ್‌ಆರ್‌ಪಿ, ಮೈಸೂರು | ಪೊಲೀಸ್ ಅತಿಥಿ ಗೃಹ–08 | 2019 | ಎಡಿಜಿಪಿ, ಕೆಎಸ್‌ಆರ್‌ಪಿ, ಬೆಂಗಳೂರು ರವರ ಜ್ಞಾಪನ ಸಂಖ್ಯೆ: ಎಡಿಜಿಪಿ/ಕೆಎಸ್‌ಆರ್‌ಪಿ/ಇತರೆ/2019, ದಿನಾಂಕ:05.03.2019 ರನ್ವಯ ವಸತಿ ಗೃಹವನ್ನು ಅತಿಥಿ ಗೃಹವನ್ನಾಗಿ ಪರಿವರ್ತಿಸಲಾಗಿರುತ್ತದೆ. |
| 27 | 5ನೇ ಪಡೆ, ಕೆಎಸ್‌ಆರ್‌ಪಿ, ಮೈಸೂರು | ಆಡಳಿತ ಕಛೇರಿ ಮುಂಭಾಗ ಇರುವ ಪಡೆಯ ಅಧೀನದ ಸನ್ನಿಸೈಡ್ ಗೆಸ್ಟ್‌ಹೌಸ್ | 1916 | 5ನೇ ಪಡೆ, ಕೆಎಸ್‌ಆರ್‌ಪಿ, ಮೈಸೂರು ಘಟಕದ ಆಡಳಿತ ಕಛೇರಿಯು ಪ್ರಾರಂಭವಾದ ದಿನದಿಂದ 2006 ರವರೆವಿಗೂ ಸನ್ನಿಸೈಡ್ ಗೆಸ್ಟ್‌ಹೌಸ್ ನಲ್ಲಿ ಕಾರ್ಯ ನಿರ್ವಹಿಸಲಾಗುತ್ತಿತ್ತು. ತದನಂತರ ಸನ್ನಿಸೈಡ್ ಗೆಸ್ಟ್‌ಹೌಸ್‌ನ ಹಿಂಭಾಗ ಹೊಸ ಆಡಳಿತ ಕಛೇರಿಯು ನಿರ್ಮಾಣಗೊಂಡ ನಂತರ ಆಡಳಿತ ಕಛೇರಿಯು ಹೊಸ ಕಟ್ಟಡಕ್ಕೆ ಸ್ಥಳಾಂತರವಾಯಿತು. ನಂತರ ಡಿಐಜಿಪಿ, ಕೆಎಸ್‌ಆರ್‌ಪಿ, ಬೆಂಗಳೂರು ರವರ ನಡವಳಿ ಆದೇಶ ಸಂಖ್ಯೆ: 15/ಕಟ್ಟಡ/5ನೇ ಪಡೆ/2007–08, ದಿನಾಂಕ: 20.06.2008 ರ ಪ್ರಕಾರ ಸನ್ನಿಸೈಡ್ ಗೆಸ್ಟ್‌ಹೌಸ್ ಕಟ್ಟಡವನ್ನು ನವೀಕರಣಗೊಳ ಸಲಾಗಿರುತ್ತದೆ. |

In No: 35832
07 AUG 2020
ಬೆಂಗಳೂರು

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯ: ಸೀನಿಯರ್ ಪೊಲೀಸ್ ಆಫೀಸರ್ಸ್ ಮೆಸ್ ಅನ್ನು "ಸೀನಿಯರ್ ಪೊಲೀಸ್ ಆಫೀಸರ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್" ಎಂದು ಮರು ನಾಮಕರಣ ಮಾಡುವ ಕುರಿತು.

ಓದಲಾಗಿದೆ: ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ಪತ್ರ ಸಂಖ್ಯೆ:ಆರ್.ಎಲ್.ಎ.(1) 71/2014-15, ದಿನಾಂಕ:03.05.2019.

<u>ಪ್ರಸ್ತಾವನೆ:-</u>

ಮೇಲೆ ಓದಲಾದ ಪತ್ರ/ಪ್ರಸ್ತಾವನೆಯಲ್ಲಿ ಬೆಂಗಳೂರು ನಗರದಲ್ಲಿರುವ ಸೀನಿಯರ್ ಪೊಲೀಸ್ ಆಫೀಸರ್ಸ್ ಮೆಸ್‌ಗೆ ರಾಜ್ಯದ ಮತ್ತು ಭಾರತದ ಎಲ್ಲಾ ರಾಜ್ಯಗಳಿಂದ ಹಿರಿಯ ಐ.ಪಿ.ಎಸ್. ಅಧಿಕಾರಿಗಳು ಕರ್ತವ್ಯದ ನಿಮಿತ್ತ ಆಗಮಿಸಿ, ವಾಸ್ತವ್ಯ ಹೂಡಲು ಆಗಮಿಸುತ್ತಿರುತ್ತಾರೆಂದು, ಸದರಿ ಕಟ್ಟಡವು ಹಿರಿಯ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ತನಿಖೆಯ ಸಂಬಂಧ, ಎಲ್ಲಾ ರೀತಿಯ ತರಬೇತಿ/ಪೊಲೀಸ್ ಇಲಾಖೆಯ ಗೌಪ್ಯ ಸಭೆಗಳನ್ನು ಆಯೋಜಿಸಲು ಸುವ್ಯವಸ್ಥಿತವಾಗಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ, ಸದರಿ ಕಟ್ಟಡದಲ್ಲಿ ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ, ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳ ಹಾಗೂ ಪೊಲೀಸ್ ಇಲಾಖೆ ಸಂಬಂಧ ಸಂಶೋಧನೆ/ಅಭಿವೃದ್ಧಿ ಬಗ್ಗೆ ಚರ್ಚಿಸಲು ಸೂಕ್ತವಾದ ಕಟ್ಟಡವಾಗಿದ್ದು, ಹಿರಿಯ ಪೊಲೀಸ್ ಅಧಿಕಾರಿಗಳು ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಗೌಪ್ಯತೆ ಕಾಪಾಡಲು ಹಾಗೂ ಭದ್ರತಾ ದೃಷ್ಟಿಯಿಂದ ಪುಂಬಾ ಸುರಕ್ಷಿತ ತಾಣವಾಗಿದ್ದು, ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಕಟ್ಟಡಕ್ಕೆ ಸೀನಿಯರ್ ಪೊಲೀಸ್ ಆಫೀಸರ್ಸ್ ಮೆಸ್ ಅನ್ನು "ಸೀನಿಯರ್ ಪೊಲೀಸ್ ಆಫೀಸರ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್" (Senior Police Officers Research and Training Institute) ಎಂದು ಮರು ನಾಮಕರಣ ಮಾಡಿ ಸರ್ಕಾರದ ಮಂಜೂರಾತಿ ಆದೇಶ ಹೊರಡಿಸುವಂತೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಕೋರಿರುತ್ತಾರೆ.

DG & IGP

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 07 ಪಿಓಪಿ 2019</u>

A.D.G.P. Admn.

<u>ಬೆಂಗಳೂರು, ದಿನಾಂಕ:06/ಆಗಸ್ಟ್/2020</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರದಲ್ಲಿರುವ ಸೀನಿಯರ್ ಪೊಲೀಸ್ ಆಫೀಸರ್ಸ್ ಮೆಸ್ ಅನ್ನು "ಸೀನಿಯರ್ ಪೊಲೀಸ್ ಆಫೀಸರ್ಸ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್" (Senior Police Officers Research and Training Institute) ಎಂದು ಮರು ನಾಮಕರಣ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪರಮೇಗೌಡ ಮೇಲ್ಗಿರಿ)
ಸರ್ಕಾರದ ಉಪ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

(P & M)
REN

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ.), ಕರ್ನಾಟಕ, ಪೋಸ್ಟ್ ಬ್ಯಾಗ್ ನಂ. 5329, ಆಡಿಟ್ ಭವನ, [illegible]

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 12ನೇ ಹಣಕಾಸು ಯೋಜನೆ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ:

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರಸಂಖ್ಯೆ: ಟಿಟಿಎಂ/ಹ.ಹ.ಕಾ.ಆಯೋಗ/2009 ದಿನಾಂಕ:02/05/2009

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:02/05/2009ರ ಪತ್ರದಲ್ಲಿ, ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, 2009-10 ನೇ ಸಾಲಿಗೆ 12ನೇ ಆರ್ಥಿಕ ಹಣಕಾಸು ಯೋಜನೆ ಅಡಿಯಲ್ಲಿ ಅನುಮೋದಿಸಲಾಗಿರುವ ಒಟ್ಟು ರೂ.25.00 ಕೋಟಿಗಳನ್ನು ಪೋಲೀಸ್ ಆಡಳಿತ ಸುಧಾರಣೆಗಾಗಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ:07:ಪಿಎಫ್‌ಎಸ್:2009(ಭಾಗ)
ಬೆಂಗಳೂರು, ದಿನಾಂಕ:27/05/2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 12ನೇ ಹಣಕಾಸು ಯೋಜನೆ ಅಡಿಯಲ್ಲಿ ಪೋಲೀಸ್ ಆಡಳಿತದ ಸುಧಾರಣೆಗಾಗಿ 2009-10 ನೇ ಸಾಲಿಗೆ ರೂ.25.00 ಕೋಟಿಗಳನ್ನು (ಇಪ್ಪತ್ತೈದು ಕೋಟಿ ರೂಪಾಯಿಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಉಪಯೋಗಿಸಿಕೊಳ್ಳಲು ಸರ್ಕಾರವು ಈ ಮೂಲಕ ಮಂಜೂರಾತಿಯನ್ನು ನೀಡಿದೆ.

1. ಈ ಮೊತ್ತವನ್ನು ಕ್ರಿಯಾ ಯೋಜನೆಯಲ್ಲಿನ ಅನುಮೋದಿತ ಅಂಶಗಳಿಗೆ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು.

2. ಸದರಿ ಅನುದಾನದ ಬಳಕೆ ಕುರಿತು ಕಾಲಮಿತಿ ಅವಧಿಯಲ್ಲಿ ತ್ರೈಮಾಸಿಕ ಪ್ರಗತಿ ಪ್ರಮಾಣ ಪತ್ರಗಳನ್ನು ಆರ್ಥಿಕ ಇಲಾಖೆಯ ಆರ್ಥಿಕ ಆಯೋಗ ಕೋಶಕ್ಕೆ ಸಲ್ಲಿಸತಕ್ಕದ್ದು.

ಈ ವೆಚ್ಚವನ್ನು 2009-10 ನೇ ಸಾಲಿನ ಲೆಕ್ಕ ಶೀರ್ಷಿಕೆ 2055-00-800-0-11-ಯೋಜನೇತರ ಇದರಡಿಯಲ್ಲಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ:28:ಆಆಕೋ:09 ದಿನಾಂಕ:20/05/2009ರ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

ಬಿ.ಎಂ. ಲಕ್ಷ್ಮೀನಾರಾಯಣ
ಬಿ.ಎಂ. ಲಕ್ಷ್ಮೀನಾರಾಯಣ 27/5
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಬಿ.ಎಂ. ಲಕ್ಷ್ಮೀನಾರಾಯಣ
(ಬಿ.ಎಂ. ಲಕ್ಷ್ಮೀನಾರಾಯಣ) 27/5
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊಲೀಸ್ ವೆಚ್ಚ)

<u>ಪ್ರತಿ:</u>

1. ಜಂಟಿ ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಆರ್.ವಿ. ಕಾಲೇಜು ಅಂಚೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-560059. ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ 50 ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.
2. ಮಹಾಲೇಖಪಾಲರು, (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
3. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು.
4. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಆರ್ಥಿಕ ಆಯೋಗ ಕೋಶ.
6. ಶಾಖಾ ರಕ್ಷಾ ಕಡತ ಹಾಗೂ ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ:</u>

1. ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ.
2. ಸರ್ಕಾರದ ಕಾರ್ಯದರ್ಶಿ (ಪಿಸಿಎಸ್‌ಆರ್) ರವರ ಆಪ್ತ ಸಹಾಯಕರು.
3. ಸರ್ಕಾರದ ಸಹ ಕಾರ್ಯದರ್ಶಿಯವರ ಆಪ್ತ ಸಹಾಯಕರು.

CamScanner

<u>ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ಕಛೇರಿ</u>

<u>ನಡವಳಿಗಳು</u>

ವಿಷಯ: ಬೆಂಗಳೂರು ನಗರದ ಹಿರಿಯ ಪೊಲೀಸ್ ಅಧಿಕಾರಿಗಳ ಸಂಶೋಧನಾ ಮತ್ತು ತರಬೇತಿ ಸಂಸ್ಥೆ (SPORTI) ಯಲ್ಲಿ ನವೀಕರಣ ಕಾಮಗಾರಿಗೆ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ: 1) ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಪತ್ರ ಸಂಖ್ಯೆ: ಬಿಎಫ್/10/ಸ್ಪೋರ್ಟಿ/2023-24, ದಿನಾಂಕ: 01/11/2023.

2) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 69 ಪಿಓಪಿ 2023, ಬೆಂಗಳೂರು, ದಿನಾಂಕ: 08/09/2023.

3) ಪ್ರಧಾನ ಕಛೇರಿಯ ಅನುದಾನ ಬಿಡುಗಡೆ ಆದೇಶ ಸಂಖ್ಯೆ: ಬಿಯುಡಿ-2/13/2023-24 ದಿನಾಂಕ: 05/10/2023.

4) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಸಕರು, ಕೆ.ಎಸ್.ಪಿ.ಹೆಚ್ & ಐ.ಡಿ.ಸಿಎಲ್, ಬೆಂಗಳೂರು ರವರ ಪತ್ರ ಸಂಖ್ಯೆ: ಪಿ.ಹೆಚ್.ಸಿ/538/ ಬಿ.ಯು1/128/2022, ದಿನಾಂಕ: 10-10-2023.

* * *

<u>ಪ್ರಸ್ತಾವನೆ.</u>

ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಉಲ್ಲೇಖ-1ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರಿಂದ ಹಿರಿಯ ಪೊಲೀಸ್ ಅಧಿಕಾರಿಗಳ ಸಂಶೋಧನಾ ಮತ್ತು ತರಬೇತಿ ಸಂಸ್ಥೆ (SPORTI) ಯಲ್ಲಿ ನವೀಕರಣ ಕಾಮಗಾರಿ ಕೈಗೊಳ್ಳಲು ಉಲ್ಲೇಖ-4 ರಂತೆ ಅಂದಾಜು ಪಟ್ಟಿಯನ್ನು ಪಡೆಯಲಾಗಿದ್ದು, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ರವರಲ್ಲಿ ರೂ.111.92 ಲಕ್ಷಗಳನ್ನು ಠೇವಣಿ ಇಡಲು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ಸಂಶೋಧನಾ ಮತ್ತು ತರಬೇತಿ ಸಂಸ್ಥೆ (SPORTI) ಯಲ್ಲಿ ನವೀಕರಣ ಕಾಮಗಾರಿಯನ್ನು ಸದರಿ ನಿಗಮರವರಿಂದ ಕೈಕೊಳ್ಳಲು ಅನುಮತಿ ಕೋರಿರುತ್ತಾರೆ.

ಉಲ್ಲೇಖ-2ರ ಸರ್ಕಾರದ ಆದೇಶದಲ್ಲಿ ಬೆಂಗಳೂರು ನಗರದಲ್ಲಿ ಸೀನಿಯರ್ ಪೊಲೀಸ್ ಆಫೀಸರ್ಸ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್‌ನಲ್ಲಿ ಇಲಾಖೆಗೆ ಸಂಬಂಧಿಸಿದ ಸಂಶೋದನೆ, ಕಾರ್ಯಚಟುವಟಿಕೆ, ಕಾರ್ಯಗಾರ ಮತ್ತು ತರಬೇತಿ ಕಾರ್ಯಕ್ರಮಗಳ ಆಯೋಜನೆ, ಕಟ್ಟಡ ನಿರ್ವಹಣೆ ಇತ್ಯಾಧಿ ವೆಚ್ಚಗಳನ್ನು ಭರಿಸಲು ಅನುಕೂಲವಾಗುವಂತೆ ರೂ.150.00 ಲಕ್ಷಗಳ ಅನುದಾನವನ್ನು 2023-24ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2055-00-001-0-01-051 ಸಾಮಾನ್ಯ ವೆಚ್ಚಗಳ ಅಡಿಯಲ್ಲಿ ಭರಿಸುವಂತೆ ಆದೇಶಿಸಲಾಗಿದೆ.



Scanned with OKEN Scanner

ಅದರಂತೆ, ಉಲ್ಲೇಖಿತ-3ರ ಪ್ರಧಾನ ಕಛೇರಿಯ ಆದೇಶದಲ್ಲಿ ಈ ಕಛೇರಿಗೆ 2023-24ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2055-00-001-0-01-051 ಸಾಮಾನ್ಯ ವೆಚ್ಚಗಳ ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ರೂ.150.00ಲಕ್ಷಗಳ ಅನುದಾನವನ್ನು ಖಜಾನೆ-2ರಲ್ಲಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಬಿಡುಗಡೆ ಮಾಡಲಾಗಿದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

<u>ಆದೇಶ ಸಂಖ್ಯೆ: ಬಿಎಫ್/01/2021-22</u> <u>ದಿನಾಂಕ:15/12/2023</u>

ಬೆಂಗಳೂರು ನಗರದ ಹಿರಿಯ ಪೊಲೀಸ್ ಅಧಿಕಾರಿಗಳ ಸಂಶೋಧನಾ ಮತ್ತು ತರಬೇತಿ ಸಂಸ್ಥೆ (SPORTI) ಕಟ್ಟಡದ ವಾಟರ್ ಪ್ರೂಫಿಂಗ್ ಕಾಮಗಾರಿಯನ್ನು ರೂ. 31.92 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಮತ್ತು ಕಟ್ಟಡದಲ್ಲಿ ಉಲ್ಲೇಖಿತ-4 ರಲ್ಲಿ ತಿಳಿಸಲಾಗಿರುವ ಮಾರ್ಪಾಡುಗಳನ್ನು ರೂ. 80.00 ಲಕ್ಷಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರಿಂದ ಕೈಗೊಳ್ಳಲು ಹಾಗೂ ರೂ.111.92 ಲಕ್ಷಗಳನ್ನು ಠೇವಣಿ ಇಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಡಿಜಿ&ಐಜಿಪಿ ರವರಿಂದ
ಅನುಮೋದಿಸಲ್ಪಟ್ಟಿದೆ

(ಡಾ. ಸುಮನ್ ಡಿ. ಪೆನ್ನೇಕರ್, ಐಪಿಎಸ್)
ಎಐಜಿಪಿ (ಕೇಂದ್ರಸ್ಥಾನ-1)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಪರವಾಗಿ

ಗೆ, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಸೂಕ್ತ ಕ್ರಮಕ್ಕಾಗಿ.

<u>ಪ್ರತಿಯನ್ನು</u>

1). ಸಹಾಯಕ ಪೊಲೀಸ್ ಮಹಾನಿರೀಕ್ಷಕರು, ಕೇಂದ್ರಸ್ಥಾನ, ಪೊಲೀಸ್ ಪ್ರಧಾನ ಕಛೇರಿ, ಬೆಂಗಳೂರು .
2). ಜಂಟಿ ನಿಯಂತ್ರಕರು, (ಹಣಕಾಸು), ಪ್ರಧಾನ ಕಛೇರಿ, ಬೆಂಗಳೂರು

Scanned with OKEN Scanner

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ನಗರದಲ್ಲಿ ಸೀನಿಯರ್ ಪೊಲೀಸ್ ಆಫೀಸರ್ಸ್ ರೀಸರ್ಚ್ ಅಂಡ್ ಟ್ರೈನಿಂಗ್ ಇನ್ಸ್ಟಿಟ್ಯೂಟ್‌ಗೆ ಅನುದಾನ ಒದಗಿಸುವ ಕುರಿತು - ಆದೇಶ.

ಓದಲಾಗಿದೆ:

(1) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 121 ಪಿಓಪಿ 2022, ದಿನಾಂಕ: 30/09/2022.

(2) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪತ್ರ ಸಂಖ್ಯೆ: ಬಿಎಫ್/01/2021-22, ದಿನಾಂಕ: 15/07/2023.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ, 2022-23ನೇ ಸಾಲಿಗೆ ಬೆಂಗಳೂರು ನಗರದಲ್ಲಿರುವ ಸೀನಿಯರ್ ಪೊಲೀಸ್ ಆಫೀಸರ್ಸ್ ರೀಸರ್ಚ್ ಅಂಡ್ ಟ್ರೈನಿಂಗ್ ಇನ್ಸ್ಟಿಟ್ಯೂಟ್‌ನಲ್ಲಿ ಇಲಾಖೆಗೆ ಸಂಬಂಧಿಸಿದ ಸಂಶೋಧನಾ ಕಾರ್ಯಚಟುವಟಿಕೆಗಳ ಕಾರ್ಯಾಗಾರದ ಆಯೋಜನೆ ಮತ್ತು ತರಬೇತಿ ಕಾರ್ಯಕ್ರಮಗಳ ಆಯೋಜನೆ, ಕಟ್ಟಡ ನಿರ್ವಹಣೆ ವೆಚ್ಚಗಳನ್ನು ಲೆಕ್ಕ ಶೀರ್ಷಿಕೆ 2055-00-001-0-01-051-ಸಾಮಾನ್ಯ ವೆಚ್ಚಗಳಡಿ ಲಭ್ಯವಿರುವ ಅನುದಾನ ರೂ.150.00 ಲಕ್ಷಗಳನ್ನು (ರೂಪಾಯಿ ಒಂದು ನೂರ ಐವತ್ತು ಲಕ್ಷಗಳು ಮಾತ್ರ) ಬಳಸಿಕೊಳ್ಳಲು ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, 2023-24ನೇ ಸಾಲಿಗೆ ಅವಶ್ಯಕತೆ ಇರುವಂತೆ ಬೆಂಗಳೂರು ನಗರದ "ಸೀನಿಯರ್ ಪೊಲೀಸ್ ಆಫೀಸರ್ಸ್ ರೀಸರ್ಚ್ ಅಂಡ್ ಟ್ರೈನಿಂಗ್ ಇನ್ಸ್ಟಿಟ್ಯೂಟ್" (SPORTI) ನಲ್ಲಿ ಇಲಾಖೆಗೆ ಸಂಬಂಧಿಸಿದ ಸಂಶೋಧನ ಕಾರ್ಯಚಟುವಟಿಕೆ, ತರಬೇತಿ ಕಾರ್ಯಕ್ರಮ ಮತ್ತು ಕಾರ್ಯಾಗಾರಗಳ ಆಯೋಜನೆ, ಕಟ್ಟಡ ನಿರ್ವಹಣೆ (ವಿದ್ಯುತ್, ನೀರು, ತೆರಿಗೆ, ಕ್ಲೀನಿಂಗ್, ಗಾರ್ಡನ್ ನಿರ್ವಹಣೆ) ಇತ್ಯಾದಿ ವೆಚ್ಚ ಮತ್ತು ಸೀನಿಯರ್ ಪೊಲೀಸ್ ಆಫೀಸರ್ಸ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಕಟ್ಟಡದ [illegible] ಪ್ರೂಫಿಂಗ್ ಕಾಮಗಾರಿ ಇತ್ಯಾದಿ ವೆಚ್ಚಗಳನ್ನು ಭರಿಸಲು ಅನುಕೂಲವಾಗುವಂತೆ ರೂ.150.00 ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ: 2055-00-001-0-01-051-ಸಾಮಾನ್ಯ ವೆಚ್ಚಗಳ ಅಡಿಯಲ್ಲಿ ಸಹಾಯಧನದಡಿ ಒದಗಿಸಿ, ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 69 ಪಿಓಪಿ 2023,**
**ಬೆಂಗಳೂರು, ದಿನಾಂಕ: 08/ಸೆಪ್ಟೆಂಬರ್/2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24ನೇ ಸಾಲಿಗೆ ಬೆಂಗಳೂರು ನಗರದ "ಸೀನಿಯರ್ ಪೊಲೀಸ್ ಆಫೀಸರ್ಸ್ ರೀಸರ್ಚ್ ಅಂಡ್ ಟ್ರೈನಿಂಗ್ ಇನ್ಸ್ಟಿಟ್ಯೂಟ್" (SPORTI)ನಲ್ಲಿ ಇಲಾಖೆಗೆ ಸಂಬಂಧಿಸಿದ ಸಂಶೋಧನೆ ಕಾರ್ಯಚಟುವಟಿಕೆ, ತರಬೇತಿ ಕಾರ್ಯಕ್ರಮ ಮತ್ತು ಕಾರ್ಯಾಗಾರಗಳ ಆಯೋಜನೆ, ಕಟ್ಟಡ ನಿರ್ವಹಣೆ (ವಿದ್ಯುತ್, ನೀರು, ತೆರಿಗೆ, ಕ್ಲೀನಿಂಗ್, ಗಾರ್ಡನ್

..ಮುಂದುವರೆದಿದೆ)

ALLWYN MARTIS A, FDA, COP-BCP on 22/09/23 11:04 AM

ನಿರ್ವಹಣೆ) ಇತ್ಯಾದಿ ವೆಚ್ಚ, ಮತ್ತು ಸೀನಿಯರ್ ಪೊಲೀಸ್ ಆಫೀಸರ್ಸ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಕಟ್ಟಡದ ವಾಟರ್ ಪ್ರೂಫಿಂಗ್ ಕಾಮಗಾರಿ ಇತ್ಯಾದಿ ವೆಚ್ಚಗಳನ್ನು ಭರಿಸಲು ಅನುಕೂಲವಾಗುವಂತೆ ರೂ.150.00 (ರೂಪಾಯಿ ಒಂದು ನೂರ ಐವತ್ತು ಲಕ್ಷಗಳು ಮಾತ್ರ) ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ: 2055-00-001-0-01-051-ಸಾಮಾನ್ಯ ವೆಚ್ಚಗಳ ಸಹಾಯಧನದಡಿ ಲಭ್ಯವಿರುವ ಅನುದಾನದಲ್ಲಿ ಒದಗಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 07 ಟಿಎಫ್‌ಪಿ 2023, ದಿನಾಂಕ: 31/07/2023ರಲ್ಲಿ ನೀಡಿರುವ ವಿತ್ತಾಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
Vanaja K.N.
(ಕೆ.ಎನ್.ವನಜ) 8/9/23
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ).
8/9/2023

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಇ & ಎಸ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನಂ.2, ನೃಪತುಂಗ ರಸ್ತೆ, ಬೆಂಗಳೂರು-560001.
5. ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನ ಸೌಧ, ಬೆಂಗಳೂರು
8. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು), ವಿಧಾನಸೌಧ, ಬೆಂಗಳೂರು.
9. ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು.
10. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Generated from eOffice by ALLWYN MARTIS A, FDA, COP-BCP on 22/09/23 11:04 AM

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮೈಸೂರು ನಗರದ ಸಶಸ್ತ್ರ ಮೀಸಲು ಪಡೆಯನ್ನು ಉನ್ನತೀಕರಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 134 [illegible] 2013, ದಿನಾಂಕ:13/09/2013.
2. ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ರವರ ಪತ್ರದ ಸಂಖ್ಯೆ: ಬಿ3ಸಿ/93/2013-14, ದಿನಾಂಕ:12/08/2013.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ 2013-14ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪ್ರಸ್ತಾಪಿಸಿರುವಂತೆ ಮೈಸೂರು ನಗರ ಸಶಸ್ತ್ರ ಮೀಸಲು ಪಡೆಯನ್ನು ಉನ್ನತೀಕರಿಸಲು ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರದ ತಾತ್ವಿಕ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ದಿನಾಂಕ:12/08/2013ರ ಪತ್ರದಲ್ಲಿ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಮೈಸೂರು ಘಟಕದ ಸಶಸ್ತ್ರ ಮೀಸಲು ಪಡೆಯನ್ನು ಉನ್ನತೀಕರಿಸಬೇಕಾಗಿರುತ್ತದೆ. ಮೈಸೂರು ನಗರದ ಕಮೀಷನರೇಟ್ ಘಟಕವು 1989ರಲ್ಲಿ ಹೊಸದಾಗಿ ಸೃಜನಗೊಂಡು ಸ್ವತಂತ್ರ ಘಟಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಮೈಸೂರಿನಲ್ಲಿ ಪ್ರತಿ ವರ್ಷ ನಡೆಯಲಿರುವ ವಿಶ್ವ ಪ್ರಸಿದ್ಧ ನಾಡಹಬ್ಬ ದಸರಾ ಹಾಗೂ ಮುಖ್ಯ ಬಂದೋಬಸ್ತ್ ಕರ್ತವ್ಯಗಳಿಗೆ ರಾಜ್ಯದ ಇತರೆ ಜಿಲ್ಲೆಗಳಿಂದ ಬಂದಂತಹ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಾಸ್ತವ್ಯ ಕಲ್ಪಿಸಲು ಮೈಸೂರು ನಗರ ಘಟಕದಲ್ಲಿ ಸೂಕ್ತ ಕಟ್ಟಡಗಳ ವ್ಯವಸ್ಥೆ ಇರುವುದಿಲ್ಲ. ಈ ಸಂಬಂಧ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ವಿಶ್ರಾಂತಿಗಾಗಿ ಡಾರ್ಮಿಟರಿ ಕಟ್ಟಡ ನಿರ್ಮಿಸುವುದು ಅತ್ಯಂತ ಅವಶ್ಯಕವಿರುತ್ತದೆ. ಮೈಸೂರು ನಗರ ಸಶಸ್ತ್ರ ಮೀಸಲು ಪಡೆಯ ಕಟ್ಟಡವು ಪೊಲೀಸ್ ಕಮಿಷನರ್ ರವರ ಕಛೇರಿಯಿಂದ 02ಕಿ.ಮೀ. ವ್ಯಾಪ್ತಿಯ ಒಳಗಿದ್ದು, ವಿಶಾಲವಾದ ನಿವೇಶನವನ್ನು ಹೊಂದಿರುತ್ತದೆ. ಆದರೆ ವಾಹನಗಳನ್ನು ನಿಲುಗಡೆಗೆ ವ್ಯವಸ್ಥಿತವಾದ ಶೆಡ್ ಇರುವುದಿಲ್ಲ. ಅಲ್ಲದೆ ವಾಹನಗಳಿಗೆ ಸಂಬಂಧಿಸಿದ ಸಲಕರಣೆಗಳನ್ನು ಇಟ್ಟುಕೊಳ್ಳಲು ವ್ಯವಸ್ಥಿತವಾದ ಕೊಠಡಿಗಳು ಇರುವುದಿಲ್ಲ. ಅದೇ ರೀತಿ ನಗರ ಸಶಸ್ತ್ರ ಪಡೆಗೆ ಹಂಚಿಕೆಯಾಗಿರುವ ಅಶ್ರುವಾಯುಗಳನ್ನು ಸಂಗ್ರಹಿಸಿಡಲು ಸೂಕ್ತವಾದ ಕೊಠಡಿಗಳು ಇರುವುದಿಲ್ಲ. ಆದ್ದರಿಂದ ಮೈಸೂರು ನಗರ ಪೊಲೀಸ್ ಕಮಿಷನರ್ ಘಟಕಕ್ಕೆ ಡಾರ್ಮಿಟರಿ/ಬ್ಯಾರೆಕ್ಸ್, ವಾಹನ ನಿಲುಗಡೆ ಶೆಡ್, ಡ್ಯೂಟಿ ಕಂಟ್ರೋಲ್ ರೂಂ, ವಾಹನ ವಿಭಾಗದ ಕಛೇರಿ, ವಾಹನಗಳ ಅನುಪಯುಕ್ತ ವಸ್ತುಗಳ ಸಂಗ್ರಹಣಾ ಕೊಠಡಿ, ಅಶ್ರುವಾಯು ಸಂಗ್ರಹಣಾ ಕೊಠಡಿ, ಉಗ್ರಾಣ ಕೊಠಡಿ, ರಿಕ್ರಿಯೇಷನ್ ಹಾಲ್, ಇತ್ಯಾದಿ, ಕಟ್ಟಡಗಳನ್ನು ನಿರ್ಮಿಸುವುದು ಅತ್ಯಾವಶ್ಯಕವಾಗಿರುತ್ತದೆ. ಸದರಿ ಕಟ್ಟಡಗಳ ನಿರ್ಮಾಣಕ್ಕಾಗಿ ಇಲಾಖೆಯ ವಶದಲ್ಲಿ ಕುರುಬರಹಳ್ಳಿ ಸರ್ವೆ ನಂಬರ್ 4ರಲ್ಲಿ ಖಾಲಿ ಜಾಗವು ಲಭ್ಯವಿದ್ದು, ವಸತಿಯೇತರ ಕಟ್ಟಡ ಕಾಮಗಾರಿಗಳಿಗೆ ತಗಲುವ ವೆಚ್ಚ ರೂ. 4,80,06,750/-ಗಳಿಗೆ ಮಂಜೂರಾತಿ ನೀಡುವಂತೆ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ರವರು ಸರ್ಕಾರವನ್ನು ಕೋರಿರುತ್ತಾರೆ.

...2

ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 134 ಇಎಫ್‌ಎಸ್ 2013.**
**ಬೆಂಗಳೂರು, ದಿನಾಂಕ:01/10/2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮೈಸೂರು ನಗರ ಸಶಸ್ತ್ರ ಮೀಸಲು ಪಡೆಯನ್ನು ಉನ್ನತೀಕರಿಸಲು ರೂ.100.00 ಲಕ್ಷಗಳನ್ನು (ಒಂದು ನೂರು ಲಕ್ಷ ರೂಪಾಯಿಗಳು ಮಾತ್ರ) ಮಂಜೂರು ಮಾಡಿ ಆದೇಶಿಸಿದೆ.

ಈ ವೆಚ್ಚವನ್ನು 2013-14ನೇ ಸಾಲಿನ ಲೆಕ್ಕ ಶೀರ್ಷಿಕೆ 4055-00-207-0-02-386 ನಗರ ಸಶಸ್ತ್ರ ಮೀಸಲು ಹುಬ್ಬಳ್ಳಿ ಮತ್ತು ಮೈಸೂರು ಅಡಿಯಲ್ಲಿ ಒದಗಿಸಿರುವ ರೂ.150.00ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 329 ವೆಚ್ಚ-11/2013 ದಿನಾಂಕ:24/09/2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

403
ಪೊಲೀಸ್ ಕಮೀಷನರ್ ರವರ ಕಛೇರಿ
ಮೈಸೂರು ನಗರ, ನಂ............
31
OFFICE ...
COMMISSI...
MY...

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಆರ್. ಪುಟ್ಟೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ.
ಒಳಾಡಳಿತ ಇಲಾಖೆ, (ಪೊಲೀಸ್ ವೆಚ್ಚ)

ಪ್ರತಿ:

1. ಮಹಾಲೇಖಪಾಲರು, (ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು.
3. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-5)
6. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ [ಸಮನ್ವಯ].
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

AnyScanner

## ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಬೆಂಗಳೂರು ಇವರ ನಡವಳಿಗಳು

ವಿಷಯ: 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು ಘಟಕದ ಸನ್ನಿಸೈಡ್ ವಸತಿಗೃಹದ ದುರಸ್ತಿಗಾಗಿ ತಗಲುವ ಪ್ರಸ್ತಾವನೆ ಮೊತ್ತ ರೂ.5,00,000-00 ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಕಮಾಂಡೆಂಟ್‌ರವರ ಕಛೇರಿ
5ನೇ ಪಡೆ, ಕೆ.ಎಸ್.ಆರ್.ಪಿ.
ಲಲಿತ ಮಹಲ್ ರಸ್ತೆ,
21 JUN 2008
ಮೈಸೂರು-570011
ಸಂಖ್ಯೆ: 220

ಉಲ್ಲೇಖ:
1. ಕಮಾಂಡೆಂಟ್, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು ರವರ ಪತ್ರ ಸಂಖ್ಯೆ: ಕಟ್ಟಡ/ಸನ್ನಿಸೈಡ್/2007-08 ದಿನಾಂಕ 10-06-2008.
2. ಈ ಕಛೇರಿಯ ಆದೇಶದ ಸಮಸಂಖ್ಯೆ ದಿನಾಂಕ 21-2-2008
3. ಪ್ರಧಾನ ಕಛೇರಿಯ ಅನುದಾನ ರಿಲೀಸ್ ಮೆಮೊ ಪತ್ರ ಸಂಖ್ಯೆ: ಬಿಯುಡಿ(5)/4/2008-09 ದಿನಾಂಕ 7-06-2008.

* * *

**ಪ್ರಸ್ತಾವನೆ:**

ಕಮಾಂಡೆಂಟ್, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು ರವರು ಉಲ್ಲೇಖ (1)ರ ಪ್ರಸ್ತಾವನೆಯಲ್ಲಿ, ತಮ್ಮ ಘಟಕದ ಆಧೀನದಲ್ಲಿರುವ ಸನ್ನಿಸೈಡ್ ವಸತಿಗೃಹದ ತುರ್ತು ದುರಸ್ತಿ ಪಡಿಸುವ ಸಂಬಂಧ ಪ್ರಧಾನ ಕಛೇರಿಯು ಉಲ್ಲೇಖ (2)ರ ಅನುದಾನ ರಿಲೀಸ್ ಮೆಮೋದನ್ವಯ ಒಟ್ಟು ರೂ.5 ಲಕ್ಷಗಳ (ರೂಪಾಯಿ ಐದು ಲಕ್ಷಗಳು ಮಾತ್ರ) ಅನುದಾನವನ್ನು ಬಿಡುಗಡೆಗೊಳಿಸಿರುತ್ತದೆ.

ಪ್ರಧಾನ ಕಛೇರಿಯು ದಿನಾಂಕ 13-2-2008 ರಂದು ಬಿಡುಗಡೆಗೊಳಿಸಿದ್ದ ರೂ.10,00,000-00 ಗಳ ಅನುದಾನದಲ್ಲಿ 5ನೇ ಪಡೆಯ ಸನ್ನಿಸೈಡ್ ವಸತಿಗೃಹ ದುರಸ್ತಿಗಾಗಿ Building ಕೆ.ಎಸ್.ಪಿ.ಹೆಚ್.ಸಿ.ಲಿಮಿಟೆಡ್ ರವರಿಂದ ರೂ.19,00,000-00 ಗಳಿಗೆ ಪಡೆಯಲಾಗಿದ್ದ ಅಂದಾಜು ವೆಚ್ಚಪಟ್ಟಿಯನ್ನು ಪರಿಗಣಿಸಿ, ಬಿಡುಗಡೆಯಾಗಿದ್ದ ರೂ.10 ಲಕ್ಷಗಳಿಗೆ ಉಲ್ಲೇಖ (2)ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ಪ್ರಸ್ತುತ ಉಲ್ಲೇಖ (3)ರಲ್ಲಿನ ಪತ್ರದಲ್ಲಿ ಬಿಡುಗಡೆಗೊಳಿಸಿರುವ ರೂ.5 ಲಕ್ಷಗಳ ಅನುದಾನದಲ್ಲಿ, ಬಾಕಿ ಉಳಿದಿರುವ ದುರಸ್ತಿಯನ್ನು ಮಾಡಿಸಲು ಅವಶ್ಯವಿರುವ ಸಾಮಗ್ರಿಗಳನ್ನು ಖರೀದಿಸಲು ರೂ.5,00,000-00 ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಲಾಗಿದೆ.

SS
21/06

ಕಮಾಂಡೆಂಟ್, 5ನೇ ಪಡೆ, ಕೆ.ಎಸ್.ಆರ್.ಪಿ., ಮೈಸೂರು ರವರ ಉಲ್ಲೇಖ (1)ರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 937 ಎಫ್‌ಆರ್ 2003 ದಿನಾಂಕ 21-11-2003ರ ಅನುಬಂಧದ ಕ್ರಮ ಸಂಖ್ಯೆ: 21 ಕಾಲಂ-8ರಲ್ಲಿನ ವಿತ್ತಾಧಿಕಾರದಂತೆ ಈ ಕೆಳಕಂಡಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮುಂದುವರೆದಿದೆ..